**ಶ್ರೀ ಟಿ.ಎನ್.ಜವರಾಯಿಗೌಡ, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು ರವರು ನಿಯಮ 72ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಹೇಳಿಕೆ**

**-: ಸೂಚನೆ :-**

ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಯಲ್ಲಿ ಬ್ರಿಟೀಷರ ಕಾಲದಿಂದಲೂ ಅತ್ಯಂತ ಪ್ರಮುಖವಾಗಿ ಕೆಲಸ ನಿರ್ವಹಿಸುತ್ತಾ ಬಂದಿರುವ ನಕಾಶೆಗಳನ್ನು ತಯಾರಿಸುವ ನಕಾಶೆ ವಿಭಾಗವು ಕೇಂದ್ರ ಕಛೇರಿಯಲ್ಲಿತ್ತು. ಇಲ್ಲಿ ಎಲ್ಲಾ ತರಹದ ಗ್ರಾಮ ನಕಾಶೆಗಳು ರಾಜ್ಯ / ಜಿಲ್ಲಾ / ತಾಲ್ಲೂಕು ನಕಾಶೆ ಮತ್ತು ನಗರ ಮಾಪನದ ಪಿ.ಟಿ.ಶೀಟ್ಸ್. ಸ್ಥಳೀಯ ಕ್ಷೇತ್ರ (ಎಲ್.ಎ.) ನಕಾಶೆಗಳನ್ನು ತಯಾರಿಸಿ ಮುದ್ರಣ ಮಾಡಲಾಗುತ್ತಿತ್ತು. ಆದರೆ ಸರ್ಕಾರವು ದಿನಾಂಕ:16-03-2016ರಂದು ಪ್ರಥಮ ದರ್ಜೆ ನಕಾಶೆಗಾರರು, ತಪಾಸಕರು ಮತ್ತು ಅಧೀಕ್ಷಕರ ಹುದ್ದೆಗಳನ್ನು ಕಾರ್ಯನಿರ್ವಾಹಕ ವೃಂದದೊಂದಿಗೆ ವಿಲೀನಗೊಳಿಸಿ ಆದೇಶಿಸಲಾಗಿದೆ. ದೇಶದ ಬೇರೆ ರಾಜ್ಯಗಳಲ್ಲಿಯೂ ಸಹ ಮ್ಯಾಪಿಂಗ್ ಸೆಕ್ಷನ್ ಇರುತ್ತದೆ. ಇಂತಹ ನಕಾಶೆ ವಿಭಾಗವು ತಯಾರಿಸುವ ನಕಾಶೆಗಳು ರೈತರ ಮತ್ತು ಸಾರ್ವಜನಿಕರ ಜೀವನಾಡಿ ಮತ್ತು ಬೆನ್ನೆಲುಬಾಗಿರುತ್ತದೆ. ಈ ನಕಾಶೆಗಾರರ (ಡ್ರಾಫ್ಟ್ ಮ್ಯಾನ್) ಕೊರತೆಯಿಂದ ಇಲ್ಲಿಯವರೆಗೆ 1961ರಲ್ಲಿ ಮುದ್ರಿಸಲಾಗಿರುವ ನಕಾಶೆಗಳು ಮಾತ್ರ ಲಭ್ಯವಿದ್ದು, ಹೊಸದಾಗಿ ಸೃಜನೆಯಾದ 63 ಹೊಸ ತಾಲ್ಲೂಕು ನಕಾಶೆಗಳನ್ನು ಮತ್ತು ಸುಮಾರು 27 ಜಿಲ್ಲಾ ನಕಾಶೆಗಳು ಅದರಲ್ಲಿರುವ ಗ್ರಾಮ ನಕಾಶೆಗಳನ್ನು ತಯಾರಿಸಬೇಕಾಗಿರುವುದರಿಂದ ಖಾಲಿ ಇರುವ 36 ಡ್ರಾಫ್ಟ್ ಮ್ಯಾನ್ ಹುದ್ದೆಗಳನ್ನು ಭರ್ತಿ ಮಾಡುವುದರೊಂದಿಗೆ ವಿಲೀನಗೊಳಿಸಿರುವ ಪ್ರಥಮ ದರ್ಜೆ ನಕಾಶೆಗಾರರು, ತಪಾಸಕರು ಮತ್ತು ಅಧೀಕ್ಷಕರು (ನಕಾಶೆ) ಸೇರಿದಂತೆ ಈ ಹುದ್ದೆಗಳನ್ನು ಮರುಸ್ಥಾಪಿಸಿ ವಿಲೀನಾತಿಯನ್ನು ರದ್ದುಗೊಳಿಸಿ, ಮೊದಲಿನಂತೆಯೆ ನಕಾಶೆ ವಿಭಾಗವನ್ನು ಮರು ಸ್ಥಾಪಿಸುವಂತೆ ಈ ಶೂನ್ಯ ವೇಳೆಯಲ್ಲಿ ಸರ್ಕಾರದ ಗಮನ ಸೆಳೆಯುತ್ತಿದ್ದೇನೆ..

**-: ಹೇಳಿಕೆ :-**

ಸರ್ಕಾರದ ಆದೇಶ ಸಂಖ್ಯೆ: ಕಂಇ 250 ಭೂದಾಸ 2013 ದಿನಾಂಕ:16-03-2016ರಲ್ಲಿ ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಯಲ್ಲಿ ಸುಮಾರು 8-9 ವರ್ಷಗಳಿಂದ ಡ್ರಾಫ್ಟ್‌ಮನ್ (ಹಿಂದಿನ ದ್ವಿತೀಯ ದರ್ಜೆ ನಕಾಶೆಗಾರರು) ಹುದ್ದೆಯು ಖಾಲಿ ಇದ್ದರೂ, ಈಗಿನ ಆಧುನೀಕರಣದ ವ್ಯವಸ್ಥೆಯಿಂದ ಭೂಮಾಪನ ಇಲಾಖೆಯ ಭೂಮಾಪಕರಿಂದಲೇ ಡ್ರಾಫ್ಟ್ ಮನ್‌ಗಳು ನಿರ್ವಹಿಸುವ ಕೆಲಸ ಕಾರ್ಯಗಳನ್ನು ಪಡೆಯಲಾಗುತ್ತಿತ್ತು. ಭೂಮಾಪನ ಇಲಾಖೆಗೆ ಡ್ರಾಫ್ಟ್‌ಮನ್ ವೃಂದದ ಹುದ್ದೆಯ ಅವಶ್ಯಕತೆಯು ಈಗ ಇರುವುದಿಲ್ಲವಾದ್ದರಿಂದ, ಈ ಹುದ್ದೆಗಳನ್ನು ಕಾರ್ಯನಿರ್ವಾಹಕ ವೃಂದದ ಸಮಾನಾಂತರ ಹುದ್ದೆಗಳಾದ, ಅಂದರೆ ಅಧೀಕ್ಷಕರು (ನಕಾಶೆ) ಹುದ್ದೆಯನ್ನು ಅಧೀಕ್ಷಕರು (ಕಾ.ನಿ) ವೃಂದಕ್ಕೆ, ಪರ್ಯಾವೇಕ್ಷಕರು (ನಕಾಶೆ) ಹುದ್ದೆಯನ್ನು ಪರ್ಯಾವೇಕ್ಷಕರು ವೃಂದಕ್ಕೆ ಮತ್ತು ಪ್ರಥಮ ದರ್ಜೆ ನಕಾಶೆಗಾರರ ಹುದ್ದೆಯನ್ನು ಪ್ರಥಮ ದರ್ಜೆ ಭೂಮಾಪಕರ ವೃಂದಕ್ಕೆ ಹಾಗೂ ಡ್ರಾಫ್ಟ್‌ಮನ್ ವೃಂದದ ಹುದ್ದೆಯನ್ನು ದ್ವಿತೀಯ ದರ್ಜೆ ಸಹಾಯಕ ಹುದ್ದೆಯಲ್ಲಿ ವಿಲೀನಗೊಳಿಸಲು, ಯಾವುದೇ ತೊಂದರೆ ಇರುವುದಿಲ್ಲವೆಂದು ಮತ್ತು ಈ ಎಲ್ಲಾ ಹುದ್ದೆಗಳ ವೇತನ ಶ್ರೇಣಿಯು ಸಮಾನಾಂತರವಾಗಿರುವುದರಿಂದ, ವಿಲೀನಗೊಳಿಸಿದಲ್ಲಿ ಸರ್ಕಾರಕ್ಕೆ ಯಾವುದೇ ಆರ್ಥಿಕ ಹೊರೆ ಬೀಳುವುದಿಲ್ಲ. ಆದ್ದರಿಂದ ಸದರಿ ಹುದ್ದೆಗಳನ್ನು ವಿಲೀನಗೊಳಿಸಿ ವೃಂದ ಮತ್ತು ನೇಮಕಾತಿ ನಿಯಮಗಳಂತೆ ಕ್ರಮವಹಿಸಲಾಗುತ್ತಿದೆ.

ಡ್ರಾಫ್ಟ್‌ಮನ್ ಹುದ್ದೆ ಹಾಗೂ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳ ಕಾರ್ಯಸ್ವರೂಪ ವಿಭಿನ್ನವಾಗಿರುವುದರಿಂದ ಡ್ರಾಫ್ಟ್‌ಮನ್ ಹುದ್ದೆಗಳನ್ನು ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ಪರಿಗಣಿಸಲು ಸಾಧ್ಯವಾಗುವುದಿಲ್ಲ. ಇದನ್ನು ಹೊರತುಪಡಿಸಿ ಸರ್ಕಾರದ ಆದೇಶ ಸಂಖ್ಯೆ:ಕಂಇ 250 ಭೂದಾಸ 2013, ದಿನಾಂಕ: 16-03-2016 ರಲ್ಲಿ ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಯ ಅಧೀಕ್ಷಕರು (ನಕಾಶೆ), ಪರ್ಯಾವೇಕ್ಷಕರು (ನಕಾಶೆ) ಮತ್ತು ಪ್ರಥಮ

ದರ್ಜೆ ನಕಾಶಗಾರರು ಈ ಎಲ್ಲಾ ವೃಂದದ ಹುದ್ದೆಗಳನ್ನು ಕ್ರಮವಾಗಿ ಅಧೀಕ್ಷಕರು(ಕಾ.ನಿ), ಪರ್ಯಾಯವೀಕ್ಷಕರು ಮತ್ತು ಪ್ರಥಮ ದರ್ಜೆ ಭೂಮಾಪಕರ ಹುದ್ದೆಗಳಲ್ಲಿ ವಿಲೀನಗೊಳಿಸಿ ಆದೇಶಿಸಲಾಗಿರುತ್ತದೆ.

ಆದ್ದರಿಂದ ಕೇಂದ್ರ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ನಕಾಶೆಗಾರರ ವೃಂದವನ್ನು ಕಾರ್ಯನಿರ್ವಾಹಕ ವೃಂದಕ್ಕೆ ವಿಲೀನಗೊಳಿಸಿ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಹೊರಡಿಸಿ ಆದೇಶಿಸಲಾಗಿರುತ್ತದೆ. ಪ್ರಸ್ತುತ ಕರ್ನಾಟಕ ದೂರ ಸಂವೇದಿ ಅನ್ವಯಿಕ ಕೇಂದ್ರದಿಂದ [KSRSAC] ಈ ಸೇವೆಯನ್ನು ಪಡೆಯಲಾಗುತ್ತಿರುವುದರಿಂದ ಸಾರ್ವಜನಿಕರಿಗೆ ಯಾವುದೇ ರೀತಿಯ ತೊಂದರೆಯಾಗುತ್ತಿಲ್ಲ.

**<u>ಸಂಖ್ಯೆ: ಕಂಇ 35 ಎಸ್ಎಸ್‌ಸಿ 2025</u>**

(signature)

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು